ಗುಳೇದಗುಡ್ಡ ಮತಕ್ಷೇತ್ರದಲ್ಲಿ ಇರುವ ಸಮುದಾಯ ಆರೋಗ್ಯ ಕೇಂದ್ರಗಳು.

802(198) ಶ್ರೀ ರಾಜಶೇಖರ ಶೀಲವಂತ ವೀರಣ್ಣ (ಗುಳೇದಗುಡ್ಡ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಳೇದಗುಡ್ಡ ಮತ ಕ್ಷೇತ್ರದಲ್ಲಿ ಇರುವ ಸಮುದಾಯ ಆರೋಗ್ಯ ಕೇಂದ್ರಗಳ ಒಟ್ಟು ಸಂಖ್ಯೆ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು? ಹಾಗೂ ಎಷ್ಟು ಉಪಕೇಂದ್ರಗಳಿವೆ?

ಆ) ಯಾವ ಯಾವ ಆರೋಗ್ಯ ಕೇಂದ್ರಗಳಲ್ಲಿ ಎಷ್ಟು ಜನ ಮಹಿಳಾ ವೈದ್ಯಾಧಿಕಾರಿಗಳು, ಎಷ್ಟು ಜನ ಪುರುಷ ವೈದ್ಯಾಧಿಕಾರಿಗಳು, ಎಷ್ಟು ಜನ ಮಹಿಳಾ ಆರೋಗ್ಯ ಸಹಾಯಕಿಯರು (ಉಪ ಕೇಂದ್ರಗಳಲ್ಲಿ) ಇದ್ದಾರೆ ಸಂಪೂರ್ಣ ವಿವರ ನೀಡುವುದು?

ಇ) ಆರೋಗ್ಯ ಕೇಂದ್ರಗಳಲ್ಲಿ ಭರ್ತಿ ಆಗದೇ ಉಳಿದಿರುವ ಹುದ್ದೆಗಳನ್ನು ಎಂದಿನಿಂದ ಭರ್ತಿ ಮಾಡಲಾಗುವುದು?

ಡಾ: ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ)	ಸಮುದಾಯ ಆರೋಗ್ಯ ಕೇಂದ್ರ	-	1
	ಪ್ರಾಥಮಿಕ ಆರೋಗ್ಯ ಕೇಂದ್ರಗಳು	-	8
	ಉಪ ಕೇಂದ್ರಗಳು	-	42

ಆ) ವಿವರ ಲಗತ್ತಿಸಿದೆ.

ಇ) ಗ್ರಾಮಾಂತರ ಪ್ರದೇಶದಲ್ಲಿ ಖಾಲಿ ಇರುವ ವೈದ್ಯರ ಹುದ್ದೆ ಭರ್ತಿ ಮಾಡಲು, ಜಿಲ್ಲಾಧಿಕಾರಿಗಳಿಗೆ ವೈದ್ಯರನ್ನು ನೇಮಕ ಮಾಡಲು ಅಧಿಕಾರ ನೀಡಿದೆ ; ಹಾಗೂ ಕೆಹೆಚ್ಎಸ್ಡಿಪಿ. ಅಡಿಯಲ್ಲಿ 573 ವೈದ್ಯರ ನೇಮಕ ಮಾಡುವ ಸಮಯದಲ್ಲಿ ಭರ್ತಿ ಮಾಡಲಾಗುವುದು ಹಾಗೂ ಎರಡು ಕಿರಿಯ ಆರೋಗ್ಯ ಸಹಾಯಕಿ(ಮ)ಯರ ಖಾಲಿ ಹುದ್ದೆಗಳನ್ನು ಮುಂದಿನ ನೇಮಕಾತಿಗಳಲ್ಲಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಗುಳೇದಗುಡ್ಡ ಮತ ಕ್ಷೇತ್ರದಲ್ಲಿ ಇರುವ ಸಮುದಾಯ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಕೇಂದ್ರ, ಹಾಗೂ ಉಪ ಕೇಂದ್ರಗಳಲ್ಲಿರುವ ವೈದ್ಯರ ಹಾಗೂ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಮಂಜೂರಾತಿ, ಕಾರ್ಯನಿರತ ಹಾಗೂ ಖಾಲಿ ಹುದ್ದೆ ವಿವರ.

ಪ್ರಾಥಮಿಕ ಆರೋಗ್ಯ ಕೇಂದ್ರಗಳು	ಮಂಜೂರಾದ ಹುದ್ದೆ	ಕಾರ್ಯನಿರತ ಹುದ್ದೆ	ಖಾಲಿಹುದ್ದೆ
ಸಮುದಾಯ ಆರೋಗ್ಯ ಕೇಂದ್ರ ಗುಳೇದಗುಡ್ಡ ವೈದ್ಯಾಧಿಕಾರಿಗಳು, ಗುಳೇದ ಗುಡ್ಡ	2	1	1
ಸಮುದಾಯ ಆರೋಗ್ಯ ಕೇಂದ್ರ ಗುಳೇದಗುಡ್ಡ ಮಹಿಳಾ ವೈದ್ಯಾಧಿಕಾರಿ	1	-	1
ಪ್ರಾ.ಆ.ಕೇಂದ್ರ, ಜೀವೂರ ವೈದ್ಯಾಧಿಕಾರಿಗಳು	1	1	-
" ಮಹಿಳಾ ವೈದ್ಯಾಧಿಕಾರಿ	1	1	-
" ಸೂಳೇಭಾವಿ ವೈದ್ಯಾಧಿಕಾರಿಗಳು	1	-	1
" ಮಹಿಳಾ ವೈದ್ಯಾಧಿಕಾರಿ	1	-	1
" ಅಮೀನಗರ ವೈದ್ಯಾಧಿಕಾರಿಗಳು	1	-	1
" ಕಮತಗಿ ವೈದ್ಯಾಧಿಕಾರಿಗಳು	1	1	-
" ಗೂಡೂರ "	1	-	1
" ಐಹೊಳ್ಳಿ "	1	-	1
" ಶಿರೂರ "	1	1	-
" ಕಟಗೇರಿ "	1	1	-
	13	6	7

ಕ್ರಮ ಸಂಖ್ಯೆ	ಆರೋಗ್ಯ ಸಂಸ್ಥೆಗಳ ಹೆಸರು	ಉಪಕೇಂದ್ರಗಳ ಸಂಖ್ಯೆ	ಮಂಜೂರಾದ ಹುದ್ದೆ	ಕಾರ್ಯನಿರತ ಹುದ್ದೆ	ಖಾಲಿ ಹುದ್ದೆ
1)	ಸಮುದಾಯ ಆರೋಗ್ಯ ಕೇಂದ್ರ ಗುಳೇದಗುಡ್ಡ	-	2	2	-
2)	ಪ್ರಾ.ಆ.ಕೇಂದ್ರ, ಕಟಗೇರಿ	7	7	7	-
3)	" ಜೀವೂರ	6	6	6	-
4)	" ಶಿರೂರ	6	6	6	-
5)	" ಸೂಳೇಭಾವಿ	4	4	4	-
6)	" ಅಮೀನಗಡ	4	4	4	-
7)	" ಕಮತಗಿ	5	5	5	-
8)	" ಗೂಡೂರ	6	6	4	2
9)	" ಐಹೊಳ್ಳಿ	4	4	4	-
	ಒಟ್ಟು	42	44	42	2